ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Tuesday, the 10th June, 1980/Jyats 20, 1902 S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS
(To which Oral Answers were given)

Construction of quarters for Staff of the Forest Department

7. SRI S. S. ARAKERI (Balloli).— Will the Chief Minister be pleased to state :—

(a) the total number of staff quarters constructed by the Forest Department throughout the State ;

(b) total Number of staff quarters built at Bangalore City by the Forest Department ;

(c) the total Number of staff quarters required for ministerial staff, executive staff of the Forest Department ;

(d) the number of staff quarters (house) that have been Allotted to SC. & ST. people throughout the State and the No. of houses allotted in Bijapur to SC. & ST. officials of the Forest Department ?

SRI R. GUNDU RAO (Chief Minister).—

(a) 2699.

(b) 50.

(c)	Ministerial	...	...	1872
	Executive	...	...	2913
		Total	...	4785
(d)	Throughout State	...	...	515
	At Bijapur	...	...	Nil

ಶ್ರೀ ಎಸ್. ಎಸ್. ಅರಕೇರಿ. — ಬೆಂಗಳೂರು ನಗರದಲ್ಲಿ ಅರಣ್ಯ ಇಲಾಖೆಯವರಿಂದ ನಿರ್ಮಿಸಲ್ಪಟ್ಟಿರುವ ಸಿಬ್ಬಂದಿ ಗೃಹಗಳ ಒಟ್ಟು ಸಂಖ್ಯೆ ೫೦ ಎಂದು ತಮ್ಮ ಉತ್ತರದಲ್ಲಿ ಹೇಳಿರುತ್ತೀರಿ, ಆದರೆ ಇದರಲ್ಲಿ ಪೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್‌ಗೆ ಎಷ್ಟು ಮನೆಗಳನ್ನು ಕೊಟ್ಟಿರುತ್ತೀರಿ ಎಂಬುದನ್ನು ತಿಳಿಸಬೇಕು.

† ಶ್ರೀ ಆರ್. ಗುಂಡೂರಾವ್.—ತಾವು ಕೇಳಿರುವ ಪ್ರಶ್ನೆಯಲ್ಲಿ ಪೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್‌ಗೆ ಎಷ್ಟು ಮನೆಗಳನ್ನು ಕೊಟ್ಟಿರುತ್ತೀರೆಂದು ಕೇಳಿಲ್ಲ. ಟೋಟಲ್ ಸ್ಟಾಫ್ ಕ್ವಾರ್ಟರ್ಸ್ ಎಷ್ಟಿದೆ ಎಂದು ಕೇಳಿರುವುದಕ್ಕೆ ಸರಿಯಾದ ಉತ್ತರವನ್ನು ಕೊಟ್ಟಿರುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ಇದರಲ್ಲಿ ಎರಡುವಿಧವಾದ ವಸತಿ ಗೃಹಗಳು ಇರುತ್ತವೆ. ಒಂದು ಎಕ್ಸಿಕ್ಯುಟೀವ್ ಮತ್ತು ಇನ್ನೊಂದು ಮಿನಿಸ್ಟೀರಿಯಲ್ ಸ್ಟಾಫ್ ಕ್ವಾರ್ಟರ್ಸ್ ಎಂದು. ಮನೆಗಳಿಗಾಗಿ ಅದರಲ್ಲೂ ಪೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್ ಜನಾಂಗದವರು ಯಾರಾದರೂ ವರ್ಗಾವಣೆಯಾಗಿಸಿ ಬಂದು ಮನೆಗಳನ್ನು ಕೇಳಿದರೆ ಮಿನಿಸ್ಟೀರಿಯಲ್ ಸ್ಟಾಫ್‌ನವರು ಕೇಳಿದರೆ ಎಕ್ಸಿಕ್ಯುಟೀವ್ ಸ್ಟಾಫ್ ಕ್ವಾರ್ಟರ್ಸ್ ಇದೆ ಎಂದು ಹೇಳುತ್ತಾರೆ. ಎಕ್ಸಿಕ್ಯುಟೀವ್ ಸ್ಟಾಫ್‌ನವರು ಕೇಳಿದರೆ ಮಿನಿಸ್ಟೀರಿಯಲ್ ಸ್ಟಾಫ್ ಕ್ವಾರ್ಟರ್ಸ್ ಇದೆ ಎಂದು ಹೇಳಿ ಅವರುಗಳಿಗೆ ಮನೆಗಳೇ ದೊರೆಯದೆ ಎರಡೂ ಮೂರು ವರ್ಷಗಳಿಂದ ಒಂದು ರಾದ್ಧಾಂತವೇ ಅಲ್ಲಿ ನಡೆಯುತ್ತಿದೆ. ಆದ್ದರಿಂದ ಬೆಂಗಳೂರು ಸಿಟಿಯಲ್ಲಿರತಕ್ಕಂಥ ಈ ವಸತಿ ಗೃಹಗಳಲ್ಲಿ ಪ್ರತ್ಯೇಕವಾಗಿ ಈ ಜನಾಂಗಕ್ಕೆ ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡ ಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಪೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್‌ಗೆ ಕೊಡ ಬಾರದು ಬೇರೆ ಜನಾಂಗಕ್ಕೆ ಕೊಡಬೇಕು ಎನ್ನುವುದೇನು ಇಲ್ಲ. ಸರ್ಕಾರಿ ಕ್ವಾರ್ಟರ್ಸ್ ಇರತಕ್ಕಂಥದ್ದು ಸರ್ಕಾರಿ ಅಧಿಕಾರಿಗಳಿಗೇನೇ ಕೊಡಬೇಕೇದು ಇರುತ್ತದೆ. ಇದರಲ್ಲಿ ಜಾತೀಯತೆ ಮಾಡುವುದು ಸರಕಾರದ ನೀತಿಯಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಅಧ್ಯಕ್ಷರೇ, ರಾಜ್ಯಾದ್ಯಂತ ಒಟ್ಟು ೪೭೮೧ ಸ್ಟಾಫ್ ಕ್ವಾರ್ಟರ್ಸ್ ಮಿನಿಸ್ಟೀರಿಯಲ್ ಮತ್ತು ಎಕ್ಸಿಕ್ಯುಟೀವ್ ಎರಡೂ ಕ್ಯಾಟಗರಿಯವರಿಗೂ ಬೇಕಾಗಿರುತ್ತದೆ. ಇದರಲ್ಲಿ ಈಗಿರತಕ್ಕಂಥದ್ದು ಬಿಟ್ಟು ಇನ್ನೂ ೨೨೦೦ ಮನೆಗಳು ಬೇಕಾಗಿರುತ್ತದೆ. ಅದರಿಂದ ಇದರ ನಿರ್ಮಾಣಕ್ಕಾಗಿ ಎಸ್ಟಿಮೇಟ್ ಆಗಿರುತ್ತದೆಯೇ ? ಆ ರೀತಿ ಎಸ್ಟಿಮೇಟ್ ಆಗಿದ್ದರೆ ಅದು ಎಷ್ಟು ದಿವಸಗಳಲ್ಲಿ ಮುಗಿಯಬಹುದು, ಮತ್ತು ಅದರ ಅಂದಾಜು ಖರ್ಚುಗಳೆಷ್ಟೆಂಬುದನ್ನು ತಿಳಿಸುತ್ತೀರಾ ?.

ಶ್ರೀ ಆರ್. ಗುಂಡೂರಾವ್.—ಸುಮಾರು ೧೬ ಕೋಟಿ ರೂಪಾಯಿಗಳ ಅಂದಾಜು ಮಾಡಲಾಗಿದೆ. ಸರ್ಕಾರದಲ್ಲಿ ಹಣದ ಕೊರತೆಯಿಂದಾಗಿ ಎಲ್ಲೆಲ್ಲಿ ಕ್ವಾರ್ಟರ್ಸ್ ಅವಶ್ಯಕತೆ ಇದೆಯೋ ಅಲ್ಲೆಲ್ಲ ಒಮ್ಮೆಲೇ ಕಟ್ಟಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡು ಆ ಯೋಜನೆಯ ಪ್ರಕಾರ ಹಂತಹಂತವಾಗಿ ಕಾರ್ಯಗತಗೊಳಿಸಲು ಸರ್ಕಾರ ಪ್ರಯತ್ನ ಮಾಡುತ್ತದೆ ಎಂದು ಹೇಳುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ಸಾಮಾನ್ಯವಾಗಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡ ತಕ್ಕಂಥ ಪೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್ ನೌಕರರು ವರ್ಗಾವಣೆಯಾದರೆ, ಆಯಾ ತಾಲ್ಲೂಕುಗಳಲ್ಲಿ, ಹಳ್ಳಿಗಳಲ್ಲಿ ಅವರುಗಳಿಗೆ ಮನೆಗಳು ಸಿಕ್ಕುವುದು ಬಹಳ ಕಷ್ಟವಾಗಿರುತ್ತದೆ. ಆದ್ದರಿಂದ ಸರ್ಕಾರದವರು ಮನೆಗಳನ್ನು ಅಲಾಟ್ ಮಾಡುವಾಗ ಇವರಿಗೆ ಆದ್ಯತೆಯನ್ನು ಕೊಡುವುದರ ಬಗ್ಗೆ ಸರ್ಕಾರ ಆದೇಶವನ್ನು ಕಳುಹಿಸುವ ಪ್ರಯತ್ನ ಮಾಡುತ್ತದೆಯೋ ಎಂದು ಕೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಎಲ್ಲೆಲ್ಲಿ ಬೇಕು ಎಂದು ಕೇಳುತ್ತಾರೋ ಅಲ್ಲೆಲ್ಲ ಪ್ರಾಧಾನ್ಯತೆಯನ್ನು ಕೊಡುವ ಬಗ್ಗೆ ಸರ್ಕಾರದವರು ಯೋಚನೆ ಮಾಡುತ್ತಾರೆ ಎಂದು ಹೇಳುತ್ತೇನೆ.

---

† Indicates that remarks or speeches have not been revised by the Member concerned.